**ದಿನಾಂಕ ಃ 11.12.2023**

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಸಂಖ್ಯೆ 4 ರಿಂದ 6 ರವರ ಪರ ಶ್ರೀ ಎನ್.ಎಂ ವಕೀಲರಿಂದ</u>

ಸೌಭಾಗ್ಯರವರ ಹೆಸರಿನಲ್ಲಿದ್ದ ಸ್ವತ್ತಿನ ಖಾತೆ ಚೌಡಮ್ಮರವರ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಚೌಡಮ್ಮರವರ ಹೆಸರಿಗೆ ಆದ ಖಾತೆ ತಪ್ಪು ಎಂದು ನಾನು ಪ್ರಶ್ನಿಸಿಲ್ಲ. ಆ ರೀತಿ ಖಾತೆ ಆದಾಗ ನಾನು ಸಲ್ಲಿಸಿದ ದಾವೆ ನ್ಯಾಯಾಲಯದಲ್ಲಿ ನಡೆಯುತ್ತಿತ್ತು ಎಂದರೆ ಸರಿ. ಚೌಡಮ್ಮರವರು ದಾನಪತ್ರ ಬರೆದುಕೊಟ್ಟ ಸಂಬಂದರ್ಭದಲ್ಲಿಯು ಸಹ ನಾನು ಸಲ್ಲಿಸಿದ ದಾವೆ ನ್ಯಾಯಾಲಯದಲ್ಲಿ ನಡೆಯುತ್ತಿತ್ತು ಎಂದರೆ ಸರಿ. ಆ ನಂತರ ಅದು ಪ್ರತಿವಾದಿ 4 ರಿಂದ 6 ರವರ ಹೆಸರಿಗೆ ಖಾತೆ ಬದಲಾವಣೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಬದಲಾವಣೆಯಾದಾಗ ಅದನ್ನು ಪಡೆದು ನಾನು ಸಲ್ಲಿಸಿದ ದಾವೆಯಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ಆ ರೀತಿ ಖಾತೆಯಾಗಿರುವುದು ತಪ್ಪು ಎಂದು ಪ್ರಶ್ನಿಸಿಲ್ಲ. ನಿಡಿ.20 ರಿಂದ 22 ಸರಿಯಿಲ್ಲ ಎಂದು ನಾನು ಅದನ್ನು ಪ್ರಶ್ನಿಸಿಲ್ಲ. ಆ ರೀತಿ ಮಾಡಿದ ದಾನಪತ್ರದ ಆದಾರವನ್ನು ಟ್ರಸ್ಟ್ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆನಂತರ ನಾನು ಸಲ್ಲಿಸಿದ ದಾವೆಯನ್ನು ಟ್ರಸ್ಟ್ ನವರು ಪಕ್ಷಗಾರರನ್ನಾಗಿ ಮಾಡಿಲ್ಲ. ನಿಡಿ.20 ರಿಂದ 22 ದಾನಪತ್ರಗಳಲ್ಲಿರುವ ಎಲ್ಲಾ ಸ್ವತ್ತು ಟ್ರಸ್ಟ್ ನ ಸ್ವಾಧಿನದಲ್ಲಿ ಇವೆ ಎಂದರೆ ಸರಿಯಲ್ಲ. ಆ ಎಲ್ಲಾ ಸ್ವತ್ತುಗಳಿಗೆ ಸಂಬಂಧಪಟ್ಟ ಕಂದಾಯವನ್ನು ಟ್ರಸ್ಟನವರು ನಗರಸಭೆಗೆ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೂತ್ತಿಲ್ಲ. ಆ ಸ್ವತ್ತಿಗೆ ಸಬಂಧಪಟ್ಟಂತೆ ನಾನು ಎಂದಿಗೂ ಸಹ ಕಂದಾಯ ಕಟ್ಟಿಲ್ಲ. ಆ ಸ್ವತ್ತಿನಲ್ಲಿ ನಾನು ಎಂದೂ ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ಸ್ವತ್ತುಗಳು ನನ್ನ ಸ್ವಾಧಿನದಲ್ಲಿ ಇವೆ ಎಂದು ತೊರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

ನನ್ನ ತಂಗಿ ಸೌಭಾಗ್ಯವು ಕೊಲೆಯಾಗಿದ್ದಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮತ್ತು ಮಗನ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ಹೌದು. ಆದರೆ ಆ ಪ್ರಕರಣ ಖುಲಾಸೆಯಾಗಿದೆ. ಆ ರೀತಿ ನಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾದಾಗ ಓಎಸ್ .83/2001 ನಡೆಯುತ್ತಿತ್ತು ಎಂದರೆ ಸರಿ. ಅದರಲ್ಲಿ ನಾನು ಕೊಟ್ಟ ದಾಖಲೆಗಳನು ಪರಿಗಣಿಸಿ ದಾವೆ ವಜಾ ಆಯಿತು ಎಂದರೆ ಸಾಕ್ಷಿಯು ನನಗೆ ಈ ನ್ಯಾಯಾಲಯದಲ್ಲಿ ಅನ್ಯಾಯವಾಯಿತು ಎಂದು ಹೇಳುತ್ತಾರೆ. ಅದರ ವಿರುದ್ದ ಸಲ್ಲಿಸಿದ ಮೇಲ್ಮನವಿ ಜಿಲ್ಲಾ ನ್ಯಾಯಾಲಯದಲ್ಲಿ ವಜಾ ಆಯಿತು ಎಂದರೆ ಸಾಕ್ಷಿಯು ಅಲ್ಲಿಯೂ ಸಹ ಅನ್ಯಾಯವಾಯಿತು ಎಂದು

This is a True Copy of the Court Records Online. Authenticated @ districts.ecourtsindia.com/cnr/KAMD020011472018/truecopy/order-13.pdf

www.ecourtsindia.com

ಹೆಳುತ್ತಾರೆ. ಆ ದಾವೆಯಲ್ಲಿ ಸೇರಿಸಿದ ಕೆಲವು ಸ್ವತ್ತುಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣ 2 ಸ್ವತ್ತುಗಳಿಗೆ ಸಂಬಂದಪಟ್ಟಂತೆ ನಡೆಯುತ್ತಿದೆ. ಅಸಲು ದಾವೆ 83/2001 ರಲ್ಲಿ ಮೂರು ಸ್ವತ್ತುಗಳು ಸೇರಿದ್ದವು. ಈ ದಾವೆ ಸಲ್ಲಿಸುವಾಗ ದಾವಾ ಸ್ವತ್ತಿನ ಖಾತೆ ಬಿ.ಜಿ. ಪುಟ್ಟಸ್ವಾಮಿ ಮತ್ತು ಬಿ.ಜಿ.ಸೌಭಾಗ್ಯ ಇವರ ಜಂಟಿ ಹೆಸರಿನಲ್ಲಿತ್ತು. ಆ ರೀತಿ ಜಂಟಿ ಹೆಸರಿನಲ್ಲಿದ್ದ ಖಾತೆಯನ್ನು ನಾನು ತೆಗೆದುಕೊಂಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈ ರೀತಿ ಜಂಟಿ ಖಾತೆ ಯಾವ ವರ್ಷದಿಂದ ಯಾವ ವರ್ಷದವರೆಗೂ ಇತ್ತು ಎಂದರೆ ಸಾಕ್ಷಿಯು 2004 ರಿಂದ 2010 ರವರೆಗೆ ಇತ್ತು ಎಂದು ಹೇಳುತ್ತಾರೆ. 2010 ರ ಬಳಿಕ ಆ ಖಾತೆ ಯಾರ ಹೆಸರಿಗೆ ವರ್ಗಾವಣೆಯಾಯಿತು ಎಂದು ನನಗೆ ಗೊತ್ತಿಲ್ಲ. ಆ ದಾಖಲೆ ಪಡೆದುಕೊಳ್ಳಲು ನಾನು ಪ್ರಯತ್ನಿಸಿಲ್ಲ.

ನಾನು ಸಲ್ಲಿಸಿದ ದಾವೆ ಮತ್ತು ಮೇಲ್ಮನವಿಯಲ್ಲಿ ವಜಾ ಆದ ನಂತರ ವಾದಿಗಳ ಮೂಲಕ ಈ ದಾವೆಯನ್ನು ನಾನೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲ ಎಂದು ನಾನು ಸಲ್ಲಿಸಿದ ದಾವೆಯಲ್ಲಿಯೇ ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಮೇಲ್ಮನವಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಇರುವವರೆಗೆ ಈ ದಾವೆ ನಡೆಯಲಿ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳಿಗಾಗಲಿ ನನಗಾಗಲಿ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 4 ರಿಂದ 6 ನೇ ಪ್ರತಿವಾದಿಗಳ ಹಕ್ಕು ಮತ್ತು ಸ್ವಾಧೀನಲ್ಲಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಈಗಾಗಲೇ 4 ರಿಂದ 6 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟ ಕಾರಣ ಒಟ್ಟು ಕುಟುಂಬದಲ್ಲಿ ಯಾವುದೇ ಸ್ವತ್ತುಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. 4 ರಿಂದ 6 ನೇ ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ., ಮಂಡ್ಯ.

This is a True Copy of the Court Records Online. Authenticated @ districts.ecourtsindia.com/cnr/KAMD020011472018/truecopy/order-13.pdf

www.ecourtsindia.com